ಮಿದು ಎಷ್ಟು ನಯ ಅಂತ, ಟೇಬಲ್ ಕ್ಲಾಥ್ ಆಗಿನೂ ಇದನ್ ಬಳಸಬೋದು, ಮನೀ ಬಾಗಲ್ಗೆ ಪರದೀ ಹಂಗನೂ ಹಾಕ್ಕೋಬೌದು, ತ್ರಿ ಇನ್ ಒನ್ ಐತ್ರೀ ಮ್ಯಾಡಂ, ಪ್ಲೀಸ್ ಇದನ್ ಮಾತ್ರ ಬ್ಯಾಡ್ ಅನ್ಬ್ಯಾಡ್ರಿ ಮ್ಯಾಡಂ' ಅನ್ನುತ್ತ ಅಳುಮೋರೆ ಮಾಡಿಬಿಟ್ಟದ್ದಕ್ಕಾಗಿ, ಮನಸ್ಸು ಕರಗಿದ ಸರಸ್ವತಿ ನಾಲ್ಕುನೂರು ಕೊಟ್ಟು ಬೆಡ್ ಸೀಟು ಖರೀದಿಸಿದ್ದಳು. ಮತ್ತು ಆತ ಅತ್ತ ಹೋದ ನಂತರ ಎಂಥದೋ ಸಿಟ್ಟಿನಿಂದ ಅವನ ಅಕೌಂಟ್ ತೆರೆದು ಮೊದಲು ಅವನನ್ನು ಅನ್ ಫ್ರೆಂಡ್ ಮಾಡಿದ್ದಳು. ಎಷ್ಟೋ ದಿನಗಳ ನಂತರ ಶಂಕರನಿಗೆ ಈ ಸಂಗತಿ ಹೇಳಿ ಮನಸ್ಸಿನ ದುಗುಡ ಇಳಿಸಿಕೊಂಡಿದ್ದಳು ಕೂಡ. 'ಮತ್ತೊಮ್ಮೆ ಹೀಂಗ ಅಪರಿಚಿತರನ್ನು ಮನೀಗ್ ಸೇರ್ಸು ಮುಂದ ಭಾಳ ಯೋಚ್ನೀ ಮಾಡು, ಪಟ್ಣ ಇದು ಪಟ್ಣ' ಅಂತ ಶಂಕರನೂ ನಾಜೂಕಾಗಿ ಬುದ್ಧಿ ಹೇಳಿ ಪ್ರಕರಣ ಅಲ್ಲೇ ಮುಗಿಸಿದ್ದ.

ಅಂದಿನಿಂದ ಸರಸ್ವತಿ ಆಗಾಗ ತನ್ನ ಫೇಸ್‌ಬುಕ್ ಸಂಗತಿಗಳನ್ನೆಲ್ಲ ಅಭಿಮಾನದಿಂದ ಹೇಳಿಕೊಳ್ಳುವಾಗ ಯಾಕೋ ಅತಿರೇಕವೆನ್ನಿಸಿದರೆ ಶಂಕರ 'ಅದೇ ಇನ್‌ಸೂರೆನ್ಸ್ ಏಜೆಂಟಿನ ನಾಕ್ನೂರು ರೂಪಾಯ್‌ನ ಬೆಡ್ ಸೀಟ್ ಪ್ರಕರಣ' ಅಂತ ತಮಾಷೆ ಮಾಡಿಕೊಂಡು ನೆನಪಿಸುವನು. ಅವನೂ ಸಹ ಫೇಸ್‌ಬುಕ್‌ನಲ್ಲಿ ಅಷ್ಟು ಬೇಗ ನಂಬಿಕೆ ಕಳೆದುಕೊಳ್ಳಲು ತಯಾರಿರಲಿಲ್ಲ, ಅದಕ್ಕೆ ಬಹುಮುಖ್ಯ ಕಾರಣವೂ ಇತ್ತು. ಪತ್ರಿಕೆಗಳನ್ನು ಅಷ್ಟಾಗಿ ಓದುವ

